ಶ್ರೀ ಜೆ.ಹೆಚ್. ಪಟೇಲ್(ಮುಖ್ಯಮಂತ್ರಿಗಳು) : ಉತ್ಸವ ನಿಲ್ಲುವುದಕ್ಕೆ ಕಾರಣ ಏನೆಂಬುದು ತಿಳಿದುಕೊಳ್ಳುತ್ತೇನೆ. ಅದು ಸಕಾರಣ ಅಲ್ಲದಿದ್ದರೆ ಮತ್ತೆ ಉತ್ಸವವನ್ನು ಮಾಡೋಣ.

(ಘ) ದಿನಗೂಲಿ ನೌಕರರನ್ನು ಖಾಯಂ ಮಾಡುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಉಪಾಧ್ಯಕ್ಷರೆ, ತಾವು ಆಗಲೆ ನನ್ನನು ಕರೆದಂಥ ಸಂದರ್ಭದಲ್ಲಿ ನಾನು ಎ.ಪಿ.ಎಂ.ಸಿ. ಮಂತ್ರಿಗಳು ಕರೆದಿದ್ದ ಸಭೆಗೆ ಹೋಗಿದ್ದೆ. ಎರಡು ದಿವಸದಿಂದ ದಿನಗೂಲಿ ನೌಕರರು ವಿಧಾನಸೌಧವನ್ನು ಮುತ್ತಿಗೆ ಹಾಕುವಂತೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ನೆನ್ನೆ ದಿವಸ ದಿನಗೂಲಿ ನೌಕರರ ಮೆರವಣಿಗೆಯಿಂದ ಬೆಂಗಳೂರಿನಲ್ಲಿ ಟ್ರಾಫಿಕ್ ಬಂದ್ ಆಗಿತ್ತು. ಇವತ್ತು ಬೆಳಿಗ್ಗೆ ನನಗೆ ಎಂಥ ಪರಿಸ್ಥಿತಿ ಬಂತು ಎಂದರೆ, ನಾನು ಬೆಳಿಗ್ಗೆ 5 ಗಂಟೆಗೆ ವಾಕಿಂಗ್ ಬಂದಾಗ ಪೋಲೀಸ್‌ನವರು ನನ್ನನ್ನು ಹಿಡಿದುಕೊಳ್ಳುವುದಕ್ಕೆ ಬಂದರು. ದಿನಗೂಲಿ ನೌಕರರು ಮುತ್ತಿಗೆ ಹಾಕುತ್ತಾರೆಂದು ವಿಧಾನ ಸೌಧದ ಸುತ್ತಲು ಪೋಲೀಸ್ ಬ್ಯಾರಿಕೇಡ್ ಹಾಕಿರುವುದರಿಂದ ಇಲ್ಲಿ ಬಿಗಿಯಾದಂತಹ ಪರಿಸ್ಥಿತಿ ಉಂಟಾಗಿದೆ. ವಿಧಾನಸೌಧದ ಸುತ್ತಲು ಇಂಥ ಒಂದು ಪರಿಸ್ಥಿತಿ ಮೂರು ದಿನಗಳಿಂದಲೂ ನಿರ್ಮಾಣವಾಗಿದೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ? ದಿನಗೂಲಿ ನೌಕರರ ಸಮಸ್ಯೆ ಏನು? ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೋಸ್ಕರ ಅವರ ಜೊತೆ ಮಾತುಕತೆ ನಡೆಯುತ್ತಿದೆಯೇ? ಏಕೆಂದರೆ, ದಿನಗೂಲಿ ನೌಕರರ ಮಹಾ ಮಂಡಲದವರು ಈ ಹೋರಾಟ ಮಾಡುತ್ತಿದ್ದಾರೆ, ಇದರಲ್ಲಿ ಅಂಗನವಾಡಿ ಮತ್ತು ಪಂಚಾಯತ್ ನೌಕರರು ಹಾಗೆಯೇ ಬೇರೆ ಬೇರೆ ಇಲಾಖೆಯ ನೌಕರೆಲ್ಲರೂ ಇದ್ದಾರೆ. ಸಾವಿರಾರು ನೌಕರರು ಎರಡು ದಿವಸದಿಂದಬೆಂಗಳೂರಿನಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಇವತ್ತು ವಿಧಾನ ಸೌಧದ ಸುತ್ತಲು ಬಿಗಿಯಾದದಂತಹ ವಾತಾವರಣ ಇದೆ ಮತ್ತು ಬಂದೋಬಸ್ತು ಮಾಡಲಾಗಿದೆ. ಇವರ ಸಮಸ್ಯೆಗೆ ಪರಿಹಾರ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆಯೆ? ಅಥವಾ ಇವರ ಜೊತೆ ಮಾತುಕತೆ ಮಾಡಲಾಗಿದೆಯೇ? ಇವರ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ನಿಟ್ಟಿನಲ್ಲಿ ಸರ್ಕಾರ ಏನಾದರೂ ಮಾಡುತ್ತಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ದಿನಗೂಲಿ ನೌಕರರು ಸರ್ಕಾರಕ್ಕೆ ಅನೇಕ ಬಾರಿ ಮನವಿಯನ್ನು ಸಲ್ಲಿಸಿದ್ದಾರೆ. ಪ್ರತಿ ವರ್ಷ ಬಹಳ ದೊಡ್ಡ ಪ್ರಮಾಣದಲ್ಲಿ ಸಾವಿರಾರು ಜನರು ಇಲ್ಲಿ ಸತ್ಯಾಗ್ರಹ ಮತ್ತು ಮೆರವಣಿಗೆ ಮಾಡುತ್ತಿದ್ದಾರೆ. ಇದನ್ನು ಬೇರೆ ಬೇರೆ ಜಿಲ್ಲೆಯಲ್ಲಿಯೂ ಕೂಡ ಮಾಡಿದ್ದಾರೆ. ಮನವಿಯನ್ನು ಕೊಡುವಾಗ ಅನೇಕ ಸಾರಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಆದರೆ, ಇವರ ಸಮಸ್ಯೆ ಬಗ್ಗೆ ಏನು ಮಾಡಬೇಕೆಂದು ಸರ್ಕಾರ ಇದುವರೆಗೂ ಪ್ರಾಮಾಣಿಕವಾಗಿ ಚಿಂತನೆ ಮಾಡಿಲ್ಲ. ಆದ್ದರಿಂದ ಇವತ್ತು ದಿನಗೂಲಿ ನೌಕರರಿಗೆ ಮುಂದೆ ಏನು ಮಾಡುತ್ತೇವೆ ಎಂಬ ವಿಚಾರವನ್ನು ಈ ಸದನದ ಮುಂದೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ನನ್ನ ಮನವಿಯಾಗಿದೆ. ಎರಡನೆಯದಾಗಿ ಮಾನ್ಯ ಶ್ರೀ ರಾಮರೆಡ್ಡಿಯವರು ಹೇಳಿದ ಹಾಗೆ ವಿಧಾನಸೌಧದ ಸುತ್ತಲು ತುರ್ತು ಪರಿಸ್ಥಿತಿ ನಿರ್ಮಾಣ ಆದಂತಹ ರೀತಿಯಾಗಿದೆ. ವಿಧಾನ ಸೌಧದ ಒಳಗಡೆ ಶಾಸಕರು ಬರಬೇಕಾದರೆ ನಾಲ್ಕು ಕಡೆಯಿಂದ ಪೋಲೀಸ್ ಸರ್ಪಕಾವಲು ಹಾಕಿದ್ದಾರೆ. ಇಷ್ಟೆಲ್ಲಾ ಬೇಕಾಗಿತ್ತೆ? ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ (ಗೃಹ ಸಚಿವರು) : ವಿಧಾನ ಸೌಧದ ಬಿಗಿ ಬಂದೋಬಸ್ತು ಮಾಡುವುದಕ್ಕೆ ಕಾರಣ ಏನೆಂದರೆ, ಇಲ್ಲಿ ಕಾರ್ಯಕಲಾಪಗಳು ಮತ್ತು ಸರ್ಕಾರಿ ಕಛೇರಿಗಳು ನಡೆಯುವ ದೃಷ್ಟಿಯಿಂದ ಇಲ್ಲಿ ಎಷ್ಟು ಪೋಲೀಸ್‌ನವರು ಇರಬೇಕೆಂದು ಮತ್ತು ಯಾವ ರೀತಿ ಬಿಗಿ ಕ್ರಮ ತೆಗೆದುಕೊಳ್ಳಬೇಕೆಂಬುದು ಪೋಲೀಸ್ ಕಮಿಷನ್‌ರವರಿಗೆ ಸಂಬಂಧಪಟ್ಟ ವಿಚಾರ. ಇದರ ಬಗ್ಗೆ ಸರ್ಕಾರ ಪ್ರತಿನಿತ್ಯ ಏಕೆ ಸಿಬ್ಬಂದಿಗಳನ್ನು ಹಾಕಿದ್ದೀರಾ ಎಂದು ಕಮಿಷನ್‌ರವರಿಗೆ ನಿರ್ದೇಶನ ಕೊಡುವುದಕ್ಕೆ ಆಗುವುದಿಲ್ಲ. ಅದು ಸರಿಯಾದದ್ದು ಅಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ದಿನಗೂಲಿ ನೌಕರರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಥವಾ ಸರ್ಕಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಕೆಲವು ಬೇಡಿಕೆಗಳನ್ನು ಬಹಳ ದಿವಸಗಳಿಂದ ಸರ್ಕಾರದ ಮುಂದಿಟ್ಟುಕೊಂಡು ಹೋರಾಟ ಮಾಡುತ್ತ ಬಂದಿದ್ದಾರೆ. ಒಂದು ವರ್ಷ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಂಘದ ಪದಾಧಿಕಾರಿಯವರ ಜೊತೆಯಲ್ಲಿ ಮತ್ತು ಅಧ್ಯಕ್ಷರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿದ್ದಾರೆ. ಇದಾದನಂತರ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಶನಿವಾರ ಸಾಯಂಕಾಲ ಸುಮಾರು ಎರಡು ಗಂಟೆಗೆಳ ಕಾಲ ಅವರ ಜೊತೆಯಲ್ಲಿ ಕುಳಿತು ಮಾತನಾಡಿದ್ದಾರೆ. ನಿನ್ನೆದಿವಸ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ನಾನು ಹಾಗೂ ನಮ್ಮ ಹಿರಿಯ ಸಚಿವರುಗಳು ಕುಳಿತು ಅವರ ಸಮಸ್ಯೆಯ ಬಗ್ಗೆ ಮಾತನಾಡಿದ್ದೇವೆ. ಇವತ್ತು ಬೆಳಿಗ್ಗೆ ನಾನು ಸರ್ಕಾರದ ಗೃಹ ಕಾರ್ಯದರ್ಶಿಗಳು ಮತ್ತು ಇನ್ನಿತರ ಅಧಿಕಾರಿಗಳು ಸುಮಾರು ಎರಡು ಗಂಟೆಗಳ ಕಾಲ ಸಂಘದ ಅಧ್ಯಕ್ಷರ ಜೊತೆಯಲ್ಲಿ ಕುಳಿತು ಮಾತನಾಡಿದ್ದೇವೆ. ನಾಳೆಯೂ ಕೂಡ ಮಾತುಕತೆಯನ್ನು ಮುಂದುವರಿಸಿದ್ದೇವೆ. ಅವರ ಕೆಲವು ಸಮಸ್ಯೆಗಳನ್ನು ಬಗೆಹರಿಸುವುದು ಹಣಕಾಸಿನ ಇತಿಮಿತಿಯಿಂದ ಬಹಳ ಕಷ್ಟ ಇದೆ. ಕೆಲವು ಸಮಸ್ಯೆಗಳನ್ನು ಪರಿಹಾರ ಮಾಡತಕ್ಕಂಥದ್ದು ಬಹಳ ಕಷ್ಟವೆಂದೂ ನಮಗೆಲ್ಲರಿಗೂ ಗೊತ್ತಿದೆ. ಅವರ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ. ಅದರೂ ಅದನ್ನು ಮಾಡತಕ್ಕಂಥದ್ದು ಬಹಳ ಕಷ್ಟವಾಗುತ್ತದೆ ನಾನು ಇದನ್ನು ಅವರ ಪದಾಧಿಕಾರಿಗಳಿಗಿ ತಿಳಿಸಿದ್ದೇನೆ. ದಿನಗೂಲಿನೌಕರರು ಇವತ್ತು ಬೆಂಗಳೂರಿನ ಜಕ್ಕರಾಯನ ಕೆರೆಯ ಅಂಗಳದಲ್ಲಿಯೇ ಇದ್ದಾರೆ. ಅವರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರ್ಕಾರದ ಕಡೆಯಿಂದ ನಾವು ಮಾಡಿದ್ದೇವೆ. ಅವರೆಲ್ಲಾ ವಾಪಸ್ಸು ಹೋಗಬೇಕು. ಅವರ ಅಧ್ಯಕ್ಷರು ಇಲ್ಲಿಯೇ ಇರಲಿ. ನಾನು ಸರ್ಕಾರದ ಪರವಾಗಿ ಮಂತ್ರಿಗಳ ಜೊತೆ ಕುಳಿತು ಚರ್ಚೆ ಮಾಡುತ್ತೇನೆ. ಅಗತ್ಯ ಬಿದ್ದಲ್ಲಿ ಮುಖ್ಯ ಕಾರ್ಯದರ್ಶಿಯವರ ಜೊತೆ ಮತ್ತು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡುವುದಕ್ಕೆ ಸಹಿತ ನಾನು ಅವಕಾಶ ಮಾಡಿಕೊಡುತ್ತೇನೆ, ಎಂಬ ಭರವಸೆಯನ್ನು ಕೊಡುತ್ತೇನೆ. ಇಷ್ಟು ಮಾತ್ರ ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಚಿವರು ದಿನಗೂಲಿ ನೌಕರರ ಬೇಡಿಕೆಗಳನ್ನು ಈಡೇರಿಸುವುದು ಬಹಳ ಕಷ್ಟ ಇದೆ ಎಂದು ಹೇಳುತ್ತಿದ್ದಾರೆ. ಕೆಲವು ಇಲಾಖೆಗಳಲ್ಲಿ ನೌಕರರನ್ನು ಖಾಯಂ ಮಾಡುವುದು ಕಷ್ಟವಿದೆ ಅದು ನನಗೂ ಗೊತ್ತು. ಏಕೆಂದರೆ, ಅದನ್ನು ಸುಪ್ರೀಂ ಕೋರ್ಟ್‌ನ ತೀರ್ಪಿನ ಹಿನ್ನಲೆಯಲ್ಲಿಯೇ ಇದನ್ನು ಪರಿಹಾರ ಮಾಡಬೇಕಾಗುತ್ತದೆ. ಇವತ್ತು ಸುಮಾರು 10-15 ವರ್ಷಗಳಿಂದ ಕೆಲಸ ಮಾಡತಕ್ಕಂಥ ದಿನಗೂಲಿ ನೌಕರರು ಇದ್ದಾರೆ. ಅಂಥವರನ್ನು ಖಾಯಂ ಮಾಡಲೇಬೇಕಾಗುತ್ತದೆ. 1984ಕ್ಕೆ ಮೊದಲು ಯಾರ್ಯಾರು ಕೆಲಸ ಮಾಡುತ್ತಿದ್ದಾರೋ ಅವರನ್ನು ಖಾಯಂ ಮಾಡಬೇಕು,

ನಂತರದವರಿಗೆ ಇದು ಅನ್ವಯವಾಗುವುದಿಲ್ಲವೆಂದು ಸುಪ್ರೀಂ ಕೋರ್ಟ್ ಒಂದು ಸ್ಪಷ್ಟವಾದ ತೀರ್ಪು ಕೊಟ್ಟಿದೆ. ಆದರೆ ಈ ತೀರ್ಪಿನ ಪ್ರಕಾರ ಕೆಲವರು ಈ ವ್ಯಾಪ್ತಿಗೆ ಒಳಪಡುತ್ತಾರೆ. 1984ರ ಹಿಂದೆ ದಿನಗೂಲಿ ನೌಕರರಾಗಿದ್ದಂಥವರನ್ನು ಖಾಯಂ ಮಾಡಲೇಬೇಕಾಗುತ್ತದೆ. ಇದು ಕಷ್ಟವೆಂದು ಹೇಳಿ ಮಾಡದೇ ಇರುವುದಕ್ಕೆ ಸಾಧ್ಯವಿಲ್ಲ. ಎರಡನೆಯದು, ದಿನಗೂಲಿ ನೌಕರರು ಇವತ್ತು ಜಕ್ಕರಾಯನ ಕೆರೆಯ ಅಂಗಳದಲ್ಲಿ ಕುಳಿತುಕೊಂಡಿದ್ದಾರೆ, ಇವತ್ತು ವಿಧಾನ ಸೌಧದ ಸುತ್ತಲು ಪೋಲೀಸ್ ಬಂದೋಬಸ್ತು ಇದೆ. ನಾನು ಬೆಳಿಗ್ಗೆ 5 ಗಂಟೆಗೆ ಎದ್ದು ವಾಕಿಂಗ್ ಬರುವಾಗ ಪೋಲೀಸ್‌ನವರು ಎಂಟ್ರೆನ್ಸ್‌ನಲ್ಲಿಯೇ ಬಿಡಲಿಲ್ಲ. ಇಲ್ಲಿ ವಾಕಿಂಗ್ ಮಾಡುವುದಕ್ಕೆ ಯಾರನ್ನು ಬಿಡುತ್ತಿಲ್ಲ. ಇಂಥ ಒಂದು ಗಂಭೀರವಾದ ಪರಿಸ್ಥಿತಿ ಇಲ್ಲಿ ಏಕೆ ನಿರ್ಮಾಣವಾಗಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸುಮಾರು 25 ಸಾವಿರ ಜನರು ಸೇರಿದಂತಹ ಸಂದರ್ಭದಲ್ಲಿ ಇಲ್ಲಿನ ಕಾರ್ಯಕಲಾಪಗಳು, ಸರ್ಕಾರಿ ಕಛೇರಿಗಳು, ಸಾರ್ವಜನಿಕರ ಹಿತದೃಷ್ಟಿಯಿಂದ ಅನೇಕ ಕೆಲಸಗಳು ಇರುತ್ತದೆ, ಆ ದೃಷ್ಟಿಯಿಂದ ಇಲ್ಲಿ ಬಿಗಿ ಬಂದೋಬಸ್ತು ಮಾಡಿರುತ್ತಾರೆ. ಅದರ ಬಗ್ಗೆ ನಾನು ವಿಚಾರಿಸುತ್ತೇನೆ. ನಾನು ಇಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಸುಪ್ರೀಂಕೋರ್ಟ್ ಆಗಲಿ ಅಥವಾ ಹೈಕೋರ್ಟ್ ಆಗಲಿ ಈ ವಿಚಾರ ಮೇಲೆ ಕೊಟ್ಟಿರತಕ್ಕಂಥ ತೀರ್ಪುಗಳನ್ನು ಯಾವುದು ಸಹಿತ ಸರ್ಕಾರ ಇದುವರೆಗೂ ಉಲ್ಲಂಘನೆ ಮಾಡಿಲ್ಲ.

ಶ್ರೀ ಶ್ರೀರಾಮರೆಡ್ಡಿ: ಉಲ್ಲಂಘನೆ ಮಾಡಿದ್ದೀರಾ ಎಂದು ನಾನು ಹೇಳಲಿಲ್ಲ.

ಶ್ರೀ ಪಾಟಾಳ್‌ನಾಗರಾಜ್: ಮೂರು ದಿವಸದಿಂದ ದಿನಗೂಲಿ ನೌಕರರ ಅಧ್ಯಕ್ಷರನ್ನು ಕರೆದು ಮಾತನಾಡಲಾಗಿದೆ, ಆದರೂ ಕೂಡ ಅವರಿಗೆ ಅನುಕೂಲ ಮಾಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ ಎನ್ನತಕ್ಕಂಥ ಅರ್ಥದಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಮಾತುಕತೆ ಆಡುವಾಗ ಯಾವುದಾದರು ಅನುಕೂಲವಾಗುವಂತದ್ದು ಫಲಪ್ರದವಾಗ ಬೇಕಲ್ಲ. ಅನೇಕರು ಕೇಳತಕ್ಕಂಥ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಆಗದೇ ಇದ್ದರೆ, ಇವರಲ್ಲಿ ಅನೇಕ ಜನರಿಗೆ ವಯಸ್ಸು ಮೀರಿರುವುದರಿಂದ ಬೇರೆ ಕಡೆಗೆ ಕೆಲಸಕ್ಕೆ ಸೇರುವುದಕ್ಕೆ ಅರ್ಜಿಗಳನ್ನು ಹಾಕುವುದಕ್ಕೆ ಅವಕಾಶ ಇಲ್ಲ. ಅನೇಕ ಜನರು ಮದುವೆಗಳಾಗಿ ಬಹಳ ತೊಂದರೆಯಲ್ಲಿದ್ದಾರೆಂದು ತಮಗೆ ಗೊತ್ತಿದೆ. ಕರುಣೆಯಿಂದ, ವಿಶ್ವಾಸದಿಂದ ಅವರನ್ನು ಕರೆದು ಮಾತನಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕು. ಅವರಿಗೆ ಅನುಕೂಲಮಾಡುವಂತಹ ರೀತಿಯಲ್ಲಿ ಮಾತನಾಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ದಿನಗೂಲಿ ನೌಕರರ ಕೆಲವರಿಗೆ ಮೊಮ್ಮಕ್ಕಳು ಇದ್ದಾರೆ, ಅದೆಲ್ಲಾ ವಾಸ್ತು ಅಂಶ. ಇವರ ಸಮಸ್ಯೆಗಳ ಬಗ್ಗೆ ಸರ್ಕಾರ ಸಹಾನುಭೂತಿ ಇದೆ ಎಂಬುದನ್ನು ಹೇಳುತ್ತೇನೆ. ಮತ್ತೆ ಅವರ ಜೊತೆ ಮಾತುಕತೆಯನ್ನು ಮುಂದುವರಿಸುತ್ತೇವೆ.

(ಚ) ಬೆಂಗಳೂರಿನ ಕೃಷಿ ವಿದ್ಯಾನಿಲಯದಲ್ಲಿ 1996ನೇ ಇಸವಿಯ ಜಾಹಿರಾತು ಪ್ರಕಾರ ಆಡಳಿತ ಸಹಾಯಕರ ಹುದ್ದೆಗಳ ಅರ್ಜಿ ಕುರಿತು.

+ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ 1996ನೇ ಇಸವಿಯ ಜಾಹೀರಾತು ಪ್ರಕಾರ ಸಹಾಯಕರ ಹುದ್ದೆಗಳಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ.